ಈ) ನವೀಕರಣ ಕಾರ್ಯ ಯಾವಾಗ ಆರಂಭವಾಗುತ್ತದೆ?

ಶ್ರೀ ಡಿ.ಬಿ. ಇನಾಂದಾರ್, (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು)

ಅ)1) ಪ್ರವಾಸೋದ್ಯಮದಲ್ಲಿ ಖಾಸಗೀ ಬಂಡವಾಳ ತೊಡಗಿಸುವವರಿಗೆ ಉತ್ತೇಜನ ನೀಡಲಾಗಿದೆ.

2) ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರನ್ನು ಹೆಚ್ಚಿಸುವುದು.

3) ಪ್ರವಾಸಿಗರಿಗೆ ಉತ್ತಮ ಹಾಗೂ ಗುಣಮಟ್ಟದ ಸೌಲಭ್ಯ ಒದಗಿಸುವುದು.

4) ಪ್ರವಾಸೋದ್ಯಮಕ್ಕೆ ಸಂಬಂದಿಸಿದ ಚಟುವಟಿಕೆಗಳ ಮೂಲಕ ಉದ್ಯೋಗಾವಕಾಶಗಳನ್ನು ಕಲ್ಪಿಸುವುದು.

5. ಪರೋಕ್ಷವಾಗಿ ಆದಾಯ ಉತ್ಪತ್ತಿ.

ಆ) ಹೌದು.

ಇ) ಬೃಂದಾವನ ತೋಟವನ್ನು ಅಭಿವೃದ್ಧಿ ಮತ್ತು ನವೀಕರಣ ಮಾಡಿ, ನಿರ್ಮಾಣ ನಿರ್ವಹಣೆ ಮತ್ತು ವರ್ಗಾವಣೆ ಆಧಾರದ ಮೇಲೆ ನಿರ್ವಹಿಸಲು ಟೆಂಡರ್‌ಗಳನ್ನು ಕರೆದಿದ್ದು, ಸದರಿ ಟೆಂಡರ್ ಗಳ ಪರಿಶೀಲನೆ ಕಾರ್ಯ ಪ್ರಗತಿಯಲ್ಲಿದೆ.

ಈ) ಅತೀ ಶೀಘ್ರದಲ್ಲಿ

ಮಂಡ್ಯ ಪ್ಯಾಕೇಜಿನಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗಳು

3269 (4121) : ಶ್ರೀ ಆತ್ಮಾನಂದ ಎಂ.ಎಸ್ (ಮಂಡ್ಯ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯ ಚೀರನಹಳ್ಳಿ–ತಗ್ಗಹಳ್ಳಿ ರಸ್ತೆ ಎಂ.ಸಿ. ರಸ್ತೆಯಿಂದ ಕನ್ನಳ್ಳಿವರೆಗಿನ ರಸ್ತೆಯ ಅಭಿವೃದ್ಧಿ ಕಾಮಗಾರಿಗಳು, ಮಂಡ್ಯ ಪ್ಯಾಕೇಜ್‌ನಲ್ಲಿ ಸೇರಿವೆಯೆ

ಆ) ಹಾಗಿದ್ದಲ್ಲಿ, ಈ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಪ್ರಾರಂಭಿಸಲು ವಿಳಂಬವಾಗುತ್ತಿರಲು ಕಾರಣಗಳೇನು; ಈ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಇರುವ ತೊಡಕುಗಳೇನು; ಈ ಅಭಿವೃದ್ಧಿ ಕಾಮಗಾರಿಗಳು ತುರ್ತಾಗಿ ಪ್ರಾರಂಭವಾಗಲು, ಸಾರ್ವಜನಿಕರು, ಆಗ್ರಹಿಸುತ್ತಾ ಇರುವುದು ತಿಳಿದಿದೆಯೆ;

ಇ) ಹಾಗಿದ್ದಲ್ಲಿ, ಈ ಕಾಮಗಾರಿಗಳನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು)

ಅ) ಸೇರಿರುತ್ತದೆ.

ಆ) ಪ್ಯಾಕೇಜ್ ಟೆಂಡರನ್ನು ಪ್ರಥಮ ಭಾರಿಗೆ ಆಹ್ವಾನಿಸಲಾಗಿದ್ದು ನಿಗಧಿತ ನಿಬಂಧನೆಗಳಿಗೆ ಅನುಸಾರವಾಗಿ ಟೆಂಡರ್‌ಗಳು ಇಲ್ಲದ್ದರಿಂದ ತಿರಸ್ಕರಿಸಲಾಗಿರುತ್ತದೆ. ಇದರಿಂದ ವಿಳಂಭವಾಗಿರುತ್ತದೆ. ಮರು ಟೆಂಡರ್ ಆಹ್ವಾನಿಸಲಾಗಿದ್ದು ಟೆಂಡರನ್ನು ಅನುಮೋದಿಸಲಾಗಿರುತ್ತದೆ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮವನ್ನು ಕೈಗೊಳ್ಳಲಾಗುತ್ತಿದೆ

ಇ) ಜುಲೈ 2003ರ ತಿಂಗಳಲ್ಲಿ ಪ್ರಾರಂಭಿಸಲಾಗುವುದು

ಮಂಡ್ಯ ನಗರದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ

3270 (4123) : ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಯುವಜನ ಸೇವಾ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?